**ಪಿಡಬ್ಲ್ಯೂ 2**

ಸಾಕ್ಷಿಯನ್ನು ಪುನಃ ದಿಃ 31-08-2019 ರಂದು ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಸಿಕೆ ವಕೀಲರಿಂದ ಃ-**

ನಾನು ಈ ವಿಷಯವನ್ನು ಮೊದಲ ಬಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದು ಬೇರೆ ಯಾರಿಗೂ ಏನೂ ಹೇಳಿಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

**ಸ್ಪೆಷಲ್.ಎಸ್.ಸಿ.ಐಪಿಸಿ & ಎಸ್‌ಸಿ/ಎಸ್‌ಟಿ. ನಂಃ 01/2019**

ಪ್ರಾಸಾ ಃ 3 (ಚಾಸಾ ಃ 3 )

ಪ್ರಮಾಣೀಕರಿಸಿದ ದಿನಾಂಕಃ **31-08-2019**

ಹೆಸರು ಃ ನಾರಾಯಣಪ್ಪ
ತಂದೆಯ ಹೆಸರು ಃ ವೆಂಕಟರಾಯಪ್ಪ

ವಯಸ್ಸು ಃ 60 ವರ್ಷ

ಕೆಲಸ ಃ ಕೂಲಿ

ವಾಸ ಃ ಮುಗಿಲಹಳ್ಳಿ

**ಮುಖ್ಯ ವಿಚಾರಣೆಃ- ಮಾನ್ಯ ಪಿಪಿ ರವರಿಂದಃ**

ವೆಂಕಟೇಶಪ್ಪ ನನ್ನ ತಮ್ಮ, ಲಕ್ಷ್ಮಮ್ಮ ಆತನ ಹೆಂಡತಿ, ಚಾಸಾ 4 ಹರೀಶ ನನ್ನ ಮಗ, ಚಾಸಾ 5 ರವಿಕುಮಾರ್ ನನ್ನ ತಮ್ಮನ ಮಗ, ಮೃತ ಶ್ರೀನಾಥ ನನ್ನ ತಮ್ಮನ ಮಗ. ನಾವು ಮಾದಿಗರು, ಆರೋಪಿತರು ಬಲಜಿಗ ಜಾತಿಯವರು, ಅವರ ಗೊತ್ತು. ಶ್ರೀನಾಥ ಈಗ ಬದುಕಿಲ್ಲ. ಸುಮಾರು 11 ತಿಂಗಳ ಹಿಂದೆ ನಂಜುಂಡರೆಡ್ಡಿ ಅವರ ಜಮೀನಿನಲ್ಲಿ ನೇಣು ಹಾಕಿಕೊಂಡು ತೀರಿಕೊಂಡ. ಆರೋಪಿ ಅನಂತಪ್ಪ ಅವರ ಮನೆಯಲ್ಲಿ ಆತ ಗಾರೆ ಕೆಲಸ ಮಾಡುತ್ತಿದ್ದ. ಅನಂತಪ್ಪ ಅವರ ಮಗಳು ಅಕಿಲಳನ್ನು ಶ್ರೀನಾಥ ಪ್ರೀತಿಸುತ್ತಿದ್ದ, ನಾನು ಸಹ ಅವರು ಜೊತೆಯಲ್ಲಿ ಅಲ್ಲಲ್ಲಿ ಓಡಾಡುತ್ತಿದ್ದುದನ್ನು ನೋಡಿದ್ದೇನೆ. ನಾವು ಶ್ರೀನಾಥನಿಗೆ ಅವರ ಮತ್ತು ನಮ್ಮ ಜಾತಿ ಬೇರೆ ಬೇರೆ, ಈ ರೀತಿ ಮಾಡಬೇಡ ಎಂದು ಹೇಳಿದೆವು. ಆಗ ಆಯಿತು ಎಂದು ಸುಮ್ಮನಿದ್ದ.

ಆತ ಸಾಯುವ 2 ದಿನಗಳ ಮುಂಚೆ ಆರೋಪಿತರು ನಮ್ಮ ಮನೆಯ ಬಳಿ ಬಂದಿದ್ದು, ನಾನು, ನನ್ನ ಹೆಂಡತಿ, ತಮ್ಮ, ತಮ್ಮನ ಮಗ ಇದ್ದಾಗ ಆರೋಪಿತರು ಉದ್ದೇಶಪೂರ್ವಕವಾಗಿ ಬಂದು ನಿಮ್ಮ ಮಗ ಈ ರಿತಿ ಮಾಡುತ್ತಿದ್ದಾನೆ, ಸರಿ ಮಾಡುತ್ತೀರೋ ಇಲ್ಲವೋ, ಇಲ್ಲದ್ದಿರೆ ನಾವು ಆತನನ್ನು ಸಾಯಿಸುತ್ತೇವೆ ಎಂದು ಹೇಳಿದರು. ನಾವು ಬುದ್ದಿ ಹೇಳುತ್ತೇವೆ ಎಂದು ಹೇಳಿದೆವು. ಇದಾದ 2 ದಿನಕ್ಕೆ ಶ್ರೀನಾಥ ಕಾಡಿನಲ್ಲಿ ನೇಣು ಹಾಕಿಕೊಂಡ. ಆತ ನೇಣು ಹಾಕಿಕೊಳ್ಳಲು ಆರೋಪಿತರೇ ಕಾರಣ. ನಮ್ಮ

ಜಾತಿ ಬೇರೆ ಅವರ ಜಾತಿ ಬೇರೆ ನಮಗೆ ಅವಮಾನ ಆಗುತ್ತದೆ ಎಂದು ಆರೋಪಿತರು ಈ ರೀತಿ ಮಾಡಿದರು.

ಆತ ಸಾಯುವ 4 ದಿನಗಳ ಹಿಂದೆ ನಾನು ವೆಂಕಟರಮಣಪ್ಪ ಅವರ ಮನೆಯ ಮುಂದೆ ಮದ್ದು ಹೊಡೆಯಲು ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ. ಆಗ ಆರೋಪಿ ರಮೇಶ ನಿಮ್ಮ ಹುಡುಗನಿಗೆ ಬುದ್ದಿ ಹೇಳಿ ಸರಿ ಮಾಡಿದರೆ ಸರಿ, ಇಲ್ಲದಿದ್ದರೆ ಆತನನ್ನು ಸಾಯಿಸುತ್ತೇವೆ ಎಂದು ಹೇಳಿದ, ಆಗ ನಾನು ಒಬ್ಬನೇ ಇದ್ದೆ. ಶ್ರೀನಾಥ ಸಾಯುವ 2 ದಿನಗಳ ಮುಂಚೆ ಮನೆ ಬಿಟ್ಟು ಹೋಗಿದ್ದ. ನಾವೆಲ್ಲ ಹುಡುಕಿದೆವು. ಆ ದಿನ ರಾತ್ರಿ ಎಲ್ಲಾ ಹುಡುಕಿದೆವು. ನಾವು ಸುತ್ತ ಮುತ್ತ ಎಲ್ಲಾ ಕಡೆ ಹುಡುಕಿದೆವು.

ನನ್ನ ಮಗ ಮತ್ತು ಇತರರು ಎಲ್ಲಾ ಕಡೆ ಹುಡುಕಾಡಿದ್ದು, ನಂತರ ಕಾಡಿನಲ್ಲಿ ಹುಡುಕುತ್ತಿದ್ದಾಗ ಬೆಳಿಗ್ಗೆ 6.00 ಗಂಟೆಗೆ ಶ್ರೀನಾಥನ ಶವ ಮರದಲ್ಲಿ ನೇತಾಡುತ್ತಿದ್ದು, ಕಾಣಿಸಿತು, ವೆಂಕಟರಮಣಪ್ಪ ಶವವನ್ನು ನೋಡಿ ಅಲ್ಲೇ ಬಿದ್ದು ಹೋದರು. ಆ ವಿಷಯವನ್ನು ಊರಿಗೆ ಬಂದು ಹೇಳಿದ್ದು, ನಂತರ ನಮಗೆ ವಿಷಯವನ್ನು ಹೇಳಿದರು. ನನ್ನ ತಮ್ಮ ಈ ಬಗ್ಗೆ ದೂರನ್ನು ಕೊಟ್ಟ.

ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಅಲ್ಲಿ ಬಿದ್ದಿದ್ದ ವಸ್ತುಗಳನ್ನು ತೆಗೆದುಕೊಂಡರು. ಶವ ನೇತಾಡುತ್ತಿದ್ದು, ಶವದ ಪೋಟೋ ತೆಗೆದರು. ನಂತರ ಕೆಳಗೆ ಇಳಿಸಿದರು. ಕಾಲು ಬೆರಳಿನಿಂದ ಸೂಜಿ ಚುಚ್ಚಿದ ರೀತಿ ಆಗಿದ್ದು, ರಕ್ತ ಬಂದು, ನೆಲದಲ್ಲಿ ಬಿದ್ದಿತ್ತು. ಕೈಗಳನ್ನು ಕಟ್ಟಿತ್ತು. ಆ ರಕ್ತ ಆಗಿದ್ದ ಮಣ್ಣನ್ನು ತೆಗೆದುಕೊಂಡರು. ಆತನ ಬಳಿ ಮೊಬೈಲ್ ಮತ್ತು ಕೆಳಗೆ ಬಿದ್ದಿದ್ದ ಚೀಟಿಯನ್ನು ತೆಗೆದುಕೊಂಡರು. ಆತ ನೇಣು ಹಾಕಿಕೊಂಡಿದ್ದ ಹಗ್ಗವನ್ನು ನೋಡಿದ್ದೆ.

ನ್ಯಾಯಾಲಯದ ಮುಂದೆ ಇರುವ ಎರಡು ಹಗ್ಗ ಮು.ಮಾಲು 1 ಮತ್ತು 1 (ಎ) ಅನ್ನು ಸಾಕ್ಷಿ ಗುರುತಿಸುತ್ತಾರೆ. ಈಗ ನನಗೆ ತೋರಿಸಿದ ಪೇಪರ್ ಆ ಸ್ಥಳದಲ್ಲಿ ಬಿದ್ದಿದ್ದು, ಅದನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ 18 ಎಂದು ಗುರುತಿಸಲಾಯಿತು. ಮು.ಮಾಲು 6 ಮತ್ತು 7 ಅನ್ನು ಸಾಕ್ಷಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮಣ್ಣನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಮು.ಮಾಲು 10 ಮತ್ತು 11 ಎಂದು ಗುರುತಿಸಲಾಯಿತು. ನಿಪಿ 3 ರಿಂದ 17 ಪೋಟೋಗಳು ಆ ಸ್ಥಳದಲ್ಲಿ ತೆಗೆದಿದ್ದು.

ಶ್ರೀನಾಥನ ಬಳಿ ಇದ್ದ ಮೊಬೈಲ್ ಅನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಮೊಬೈಲ್ ಅನ್ನು ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.